**Staff:** Okay, I will make you play a game on calculation/ arithmetic. This game not only improves your mathematic skills but also you will overcome the fear of maths *(tells a poem of "10 chicks were having food, a falcon came down and picked up a chicken)*

**Children:** The song was very good

*(On a large KG sheet, tables were written on several small circles)*

**Shiv:** why these many of numbers are written here?

**Staff:** To teach you tables. Okay, tell me what is the multiplication of 4x5?

**Shiv:** *(thinks for a while)* 20

**Staff:** I have written the answers in the small chits. Find out the number 20 from those chits and keep it on the table

**Shiv:** Done *(All the other children clap for him)*

**Radha:** I would like to play this game.

**Staff:** Sure, come and pick a chit *(Radha picks up a chit where 7x3 was written)*

**Radha:** what is the answer for 7x3

**Pallavi:** It's 21, Radha. shall I find the answer chit for this multiplication?

**Staff:** Yes, please do


*(She completes the task. All the children clap for both of them)*

*(Then the children were given one cup each and was asked to keep the according to the tables written on the kg sheet. All the children used the cups they had and kept them in a circle thinking properly)*

**Rewards to the children who participate:**

- Giving tables book
- Giving clue cards having the numbers from 0 to 6

**When and how often:** once in a week and monitoring the children are learning calculation and tables.



## ಸ್ಥಂಭ 3 : ಆಟ ಮತ್ತು ಅರಿವಿನ ನಡವಳಿಕೆಯ ಅಭಿವೃದ್ಧಿ

### ಪರಿವಿಡಿ


| | |
|---|---|
| ಸ್ಥಂಭ : 3 – ಆಟ ಮತ್ತು ಅರಿವಿನ ನಡವಳಿಕೆಯ ಅಭಿವೃದ್ಧಿ | 61 |
| ಕಿರುಪರಿಚಯ | 61 |
| ಚಟುವಟಿಕೆ–1 : ಬೆರಸಿದ ಕಾಳುಗಳನ್ನು ಬೇರ್ಪಡಿಸಿ ಲೆಕ್ಕಹಾಕು | 61 |
| ಚಟುವಟಿಕೆ–2 : ಕಣ್ಣು ಮುಚ್ಚಿ ಮನೆಕಟ್ಟು | 64 |
| ಚಟುವಟಿಕೆ–3 : ಕಡ್ಡಿಗಳ ಆಟ | 66 |
| ಚಟುವಟಿಕೆ–4 : ಅಕ್ಷರದಿಂದ ಪದ ರಚಿಸಿ | 67 |
| ಚಟುವಟಿಕೆ–5 : ಆಟ ಆಡು ಲೆಕ್ಕಮಾಡು | 69 |


**ಕಿರು ಪರಿಚಯ :** ಆಟ ಮತ್ತು ಅರಿವಿನ ನಡವಳಿಕೆಯ ಅಭಿವೃದ್ದಿ ಸ್ಥಂಭವು ಮಕ್ಕಳಿಗೆ ಆಟದ ಮೂಲಕ ಅವರಲ್ಲಿ ಕಲಿಯುವ ಆಸಕ್ತಿ ಹೆಚ್ಚುವಂತೆ ಮಾಡುತ್ತದೆ. ಕಲಿಯಲು ಮನೆಯ ಸುತ್ತ ಮುತ್ತ ಮನೆಯ ಒಳಗೆ ಸಿಗುವ ಪದಾರ್ಥಗಳನ್ನು ಬಳಸಿ ಲೆಕ್ಕ, ಮಗ್ಗಿ, ಪದಗಳು, ಭಾಷೆಗಳ ಜ್ಞಾನಹೆಚ್ಚುತ್ತದೆ ಇದನ್ನು ಮಕ್ಕಳು ಕಲಿತು ಖುಷಿಪಡಲು ಈ ಚಟುವಟಿಕೆಗಳು ಸಹಕರಿಸುತ್ತವೆ. ಆತ್ಮವಿಸ್ವಾಸ ಮತ್ತು ಏಕಾಗ್ರತೆ ಹೆಚ್ಚಿ ಓದಿನಲ್ಲಿ ಆಸಕ್ತಿ ಹೆಚ್ಚಿಸಿಕೊಳ್ಳುವರು.

**ಸ್ಥಂಭ : 3 ಚಟುವಟಿಕೆ 1 : ಬೆರಸಿದ ಕಾಳುಗಳನ್ನು ಬೇರ್ಪಡಿಸಿ ಲೆಕ್ಕಹಾಕು**

**ಉದ್ದೇಶಗಳು :**

- ➢ ಮಕ್ಕಳು ಕಾಳುಗಳ ಪ್ರಯೋಜನಗಳ ಬಗ್ಗೆ ತಿಳಿಯುವರು
- ➢ ಕಾಳುಗಳ ಬಣ್ಣ ಮತ್ತು ಆಕಾರ (ಹಸಿರು–ಕೆಂಪು–ಬಿಳಿ) ತಿಳಿಯುವರು
- ➢ ಸಂಕಲನ ಲೆಕ್ಕ ಮತ್ತು ವ್ಯವಕಲನ ಲೆಕ್ಕ ಕಲಿಯುವರು

**ನಿರಿಕ್ಷಿತ ಫಲಿತಾಂಶ :**

- ➢ ಮಕ್ಕಳು ಕಾಳುಗಳನ್ನು ತಿನ್ನುವರು ಆರೋಗ್ಯವಾಗಿರುವರು.
- ➢ ಮಕ್ಕಳು ಗಣಿತವನ್ನು ಯಾವುದೆ ಭಯವಿಲ್ಲದೆ ಕಲಿಯುವರು

**ಸೂಚಿತ ಗುಂಪು :** ಈ ಚಟುವಟಿಕೆಯನ್ನು 1 ರಿಂದ 3 ನೇ ತರಗತಿ

**ಸಾಮಾಗ್ರಿ :** 4 ಬಟಲುಗಳು, 3 ಬಗೆಯ ಕಾಳು, ಹೆಸರುಬೇಳೆ, ಅವರೆಕಾಳು, ಬಟಾಣಿಕಾಳು, ಸಮಯ ನೋಡಿಕೊಳ್ಳುವುದಕ್ಕೆ ವಾಚ್, ಮೊಬೈಲ್.

**ಮಾದರಿಚಟುವಟಿಕೆ**

**ಸಿಬ್ಬಂದಿ :** ಹಾಯ್ ಮಕ್ಕಳೇ ಹೇಗಿದ್ದೀರಾ ?

**ಮಕ್ಕಳು :** ಚೆನ್ನಾಗಿದ್ದೇವ್ವೆ, ಒಂದು ಆಟ ಆಡಿಸಿ

**ಸಿಬ್ಬಂದಿ :** ಆಡಿಸುವೆ ಅದಕ್ಕೂ ಮೊದಲು ನಿಮಗೆ ಯಾವಯಾವ ಕಾಳುಗಳು ಗೊತ್ತು?

**ಕೃಷ್ಣ (ಮಗು) :** ಬೇಳೆಕಾಳು

**ಪರೀದಾ :** ಹೆಸರುಕಾಳು

**ಜಾನ್ :** ಅವರೆಕಾಳು ಮತ್ತು ಕಡಲೆಕಾಳು

**ಸಿಬ್ಬಂದಿ :** ಓ ಜಾಣ ಮಕ್ಕಳು ನೀವೆಲ್ಲ ಈ ಕಾಳುಗಳನ್ನು ತಿನ್ನುತ್ತೀರಾ?

**ಮಕ್ಕಳು :** ಇಲ್ಲ ಅಕ್ಕ ಜಾಸ್ತಿ ತಿನ್ನಲ್ಲ

**ಸಿಬ್ಬಂದಿ :** ಮಕ್ಕಳ ನೀವೆಲ್ಲ ಕಾಳುಗಳನ್ನು ಜಾಸ್ತಿ ತಿನ್ನಬೇಕು ಈ ಕಾಳುಗಳು ನಿಮಗೆ ತುಂಬಾ ಶಕ್ತಿಯನ್ನು ಕೊಡುತ್ತವೆ ಹಾಗೂ ಮೂಳೆಗಳು ಸಹ ಬಲಿಷ್ಠಗೊಳ್ಳುತ್ತವೆ. ನೀವು ಕುರಕುರೆ, ಲೇಸ್ ತಿಂದು ನಿಮ್ಮ ಆರೋಗ್ಯ ಕೆಡಿಸಿಕೊಳ್ಳುವ ಬದಲು ಈ ಕಾಳುಗಳನ್ನು ಮನೆಯಲ್ಲಿ ಉರಿದು ಉಪ್ಪುಕಾರ ಹಾಕಿ ತಿನ್ನಬಹುದು ಇದರಿಂದ ವಿಟಮಿನ್ ಮತ್ತು ಪ್ರೋಟಿನ್‌ಗಳು ದೊರೆಯುತ್ತವೆ.

**ಮಕ್ಕಳು :** ಸರಿ, ಇನ್ಮೇಲೆ ಕಾಳುಗಳನ್ನು ನಾವೆಲ್ಲ ತಿನ್ನುತ್ತೇವೆ ಈಗಾ ಆಟ ಆಡಿಸಿ

**ಸಿಬ್ಬಂದಿ :** ಹಾಗಾದರೆ ನಾನು ನಿಮಗೆ ಇಂದು ಕಾಳುಗಳಿಂದಲೇ ಆಟ ಆಡಿಸುತ್ತೇನೆ ಮೊದಲು 3 ಬಗೆಯ ಕಾಳುಗಳಾದ, ಹೆಸರುಬೇಳೆ, ಅವರೆಕಾಳು, ಬಾಟಣಿ ಕಾಳುಗಳನ್ನು 1/2 ಹಿಡಿಯಷ್ಟು ತೆಗೆದುಕೊಂಡು ಬನ್ನಿ ಹಾಗೆ 4 ಬಟಲುಗಳನ್ನು ತೆಗೆದುಕೊಂಡು ಬನ್ನಿ

**ಮಕ್ಕಳು :** ನಾವು ಮೂರುಜನ ಬೇರೆ–ಬೇರೆ ಕಾಳುಗಳನ್ನು 4 ಬಟಲುಗಳನ್ನು ತರುತ್ತೇವೆ ಅಕ್ಕ

**ಸಿಬ್ಬಂದಿ :** ತಂದ್ರಾ, ಗುಡ್. ಮಕ್ಕಳೇ ಈಗಾ ಆಡೋಣ. ಈಗಾ 3 ಬಗೆಯ ಕಾಳುಗಳನ್ನು ಒಂದು ಬಟಲಿಗೆ ಹಾಕಿ ಚೆನ್ನಾಗಿ ಬೆರೆಸಿ ಮಧ್ಯದಲ್ಲಿ ಇಡಿ.

**ಮಕ್ಕಳು :** ಇಟ್ಟೆವು, ಈಗಾ ಏನು ಮಾಡೋದು ?

**ಸಿಬ್ಬಂದಿ :** ಉಳಿದ ಬಟಲುಗಳನ್ನು ಸಾಲಾಗಿ ಜೋಡಿಸಿ ಒಬ್ಬೊಬ್ಬರಾಗಿ ಬನ್ನಿ ತಲಾ 3 ನಿಮಿಷ ಸಮಯಕೊಡುವೆ ಅಷ್ಟರಲ್ಲಿ ಬೆರಸಿರುವ 3 ಬಗೆಯ ಕಾಳುಗಳ ಮಿಶ್ರಣದಿಂದ ಒಂದೇ ಬಗೆಯ ಕಾಳುಗಳನ್ನು ಆರಿಸಿ 3 ವಿವಿಧ ಲೋಟಗಳಿಗೆ ಹಾಕಿ ನಂತರ ಪ್ರತಿ ಲೋಟದಲ್ಲಿರುವ ಕಾಳುಗಳನ್ನು ಎಣಿಸಿ ಲೆಕ್ಕ ಹಾಕಿ ಅ ಕಾಳುಗಳ ಹೆಸರು ಮತ್ತು ಬಣ್ಣ ಹೇಳಬೇಕು

**ಸಿಬ್ಬಂದಿ :** ಸರಿ ನೋಡೋಣ ಯಾರು ಮೊದಲು ಲೆಕ್ಕ ಹಾಕಿ ಹೇಳುವಿರೋ ಅವರಿಗೆ ಬಹುಮಾನ ಕೊಡುತ್ತೇನೆ

**ಜಾನಿ :** ನಾನು ಮೊದಲು ಮಾಡುತ್ತೇನೆ. ನಾನು ಕಾಳುಗಳನ್ನು ಬೇರ್ಪಡಿಸಿದೆ ಹಾಗೂ ಲೆಕ್ಕ ಹಾಕಿದೆ ಕಡಲೆಬೇಳೆ ಹಳದಿ ಬಣ್ಣ 56 ಮತ್ತು, ಅವರೆಕಾಳು  ಕಂದು ಬಣ್ಣ 44 ಹಾಗೂ ಬಟಾಣಿ ಕಾಳು ಹಸಿರು 55 ಇದೆ ಮಿಸ್

**ಸಿಬ್ಬಂದಿ :** ವೆರಿಗುಡ್ 3 ನಿಮಿಷದಲ್ಲೆ ಮುಗಿಸಿದೆ  ಈಗಾ 3 ಕಾಳುಗಳ ಸಂಖ್ಯೆಯನ್ನು ಬರೆದುಕೂಡು

**ಜಾನಿ :** ಕೂಡಿದೆ ಅಕ್ಕ 155 ಒಟ್ಟು ಕಾಳುಗಳಿವೆ .

**ಸಿಬ್ಬಂದಿ :** ವೆರಿಗುಡ್. ನಂತರ ಯಾರು ಆಡುವಿರಿ?

**ಪರೀದಾ :** ನಾನು ಆಡುವೆ ಎನ್ನುತ ಆಡುವಳು 2.30 ನಿಮಿಷದಲ್ಲೆ ಮಾಡಿದಳು

**ಸಿಬ್ಬಂದಿ :** ಬೇಗ ಆಡಿದೆ ಗುಡ್ ಈಗ ನೀನು ಆರಿಸಿದ ಬಟಾಣಿ ಕಾಳುಗಳಿಂದ 18 ಬಟಾಣಿ ಕಾಳುಗಳನ್ನು ತೆಗೆದು ಉಳಿಕೆ ಎಷ್ಟು ಇದೆ ಹೇಳು,

**ಪರಿದ:** ಇನ್ನು 37 ಇದೆ ಅಕ್ಕ ಎಂದು ಎಣಿಸಿ ಹೇಳಿದಳು

**ಸಿಬ್ಬಂದಿ :** ಸರಿ ಈ ಆಟದಿಂದ ನೀವು ಏನು ಕಲಿಯಬಹುದು?

**ಮಗು :** ಆಟ ತುಂಬಾ ಚೆನ್ನಾಗಿದೆ ನಾವು ಲೆಕ್ಕ ಕಲಿಯಲು ಈ ಆಟ ಬಹಳ ಸಹಾಯ ವಾಯಿತು, ಕಾಳುಗಳನ್ನು ತಿನ್ನಬೇಕು ಅವು ನಮಗೆ ಶಕ್ತಿ ಕೊಡುತ್ತವೆ ಎಂದು ತಿಳಿದೆ. ಅವುಗಳ ಬಣ್ಣದ ಬಗ್ಗೆ ತಿಳಿದುಕೊಂಡೆವು

**ಮಕ್ಕಳನ್ನು ಪ್ರೋತ್ಸಾಹಿಸಲು ಕೇಲವು ಬಹುಮಾನ ನೀಡಿ**

- ತಿನ್ನುವ ಕಾಳುಗಳನ್ನು ಅಲ್ಲೆ ನೀಡಿ ಪರಿಶೀಲಿಸಿ
- ಬಣ್ಣದ ಪನ್ಸಿಲ್ ನೀಡಿ ತರಕಾರಿ ಚಿತ್ರಗಳಿಗೆ ಬಣ್ಣಹಾಕಲು ತಿಳಿಸಿ

**ಪುನಾರಾವರ್ತನೆ :** ವಾರಕ್ಕೆ ಒಮ್ಮೆ ಮಕ್ಕಳಿಗೆ ಆಡಿಸಬಹುದು ಮತ್ತು ಮಕ್ಕಳು ಕಲಿತಿರುವ ಬಗ್ಗೆ ಖಾತರಿಮಾಡಿಕೊಳ್ಳಿ ಮನೆಯಲ್ಲಿ ತಾಯಿಯಂದಿರು ತಮ್ಮ ಮಕ್ಕಳಿಗೆ ಹೇಳಿಕೊಡಬಹುದು



## ಸ್ಥಂಭ – 3 ಚಟುವಟಿಕೆ 2 : ಕಣ್ಣು ಮುಚ್ಚಿ ಮನೆಕಟ್ಟು

**ಉದ್ದೇಶಗಳು :**

- ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚುವುದು
- ಮಕ್ಕಳಲ್ಲಿ ಏಕಾಗ್ರತೆ ಹೆಚ್ಚುತ್ತದೆ
- ಮಕ್ಕಳು ಕ್ರಿಯಾಶೀಲಗೊಳ್ಳುತ್ತಾರೆ

**ನಿರಿಕ್ಷಿತ ಫಲಿತಾಂಶ :**

- ಮಕ್ಕಳು ಏಕಾಗ್ರತೆಯಿಂದ ಓದುವರು
- ಮಕ್ಕಳು ಗೆಲ್ಲುವ ಛಲ ಹೊಂದುವರು
- ಬೇರೆಯವರನ್ನು ಪ್ರೋತ್ಸಾಹಿಸುವರು
- ನಾಯಕತ್ವ ಗುಣ ಹೆಚ್ಚುತ್ತದೆ

**ಸೂಚಿತ ಗುಂಪು** : 1 ರಿಂದ 4 ನೇ ತರಗತಿ

**ಸಾಮಾಗ್ರಿ** : 10–12 ಬೆಂಕಿಪೊಟ್ಟಣಗಳು, ಅಥವಾ ಮರದ ಪೀಸ್, ಕಣ್ಣಿಗೆ ಕಟ್ಟಲು ಬಟ್ಟೆ, ಸಮಯ ಪಾಲನೆಗೆ ಗಡಿಯಾರ

**ಮಾದರಿಚಟುವಟಿಕೆ**

**ಸಿಬ್ಬಂದಿ :** ನಮಸ್ತೆ ಮಕ್ಕಳೆ, ಎಲ್ಲರು ಹೇಗಿದ್ದೀರಾ?
**ಮಕ್ಕಳು :** ನಮಸ್ತೆ ಅಕ್ಕ , ನಮಗೆ ಒಂದು ಆಟ ಆಡಿಸಿ.
**ಸಿಬ್ಬಂದಿ :** ಹಾಗಾದ್ರೆ ನಾನು ನಿಮಗೆ ಒಂದು ಆಟ ಆಡಿಸುತ್ತೇನೆ. ಅದಕ್ಕೂ ಮೊದಲು ನಾವು ಹಾಡು ಹಾಡುತ್ತ ನೃತ್ಯ ಮಾಡೋಣವೆ, ಇರುವಂತಹ ಮನೆಯನ್ನು ಕಟ್ಟುವ
**ಮಕ್ಕಳು:** ಸರಿ
**ಸಿಬ್ಬಂದಿ :** ಕಟ್ಟುವ ಕಟ್ಟುವ ಮನೆಯನ್ನು ಕಟ್ಟುವ ಗಾಳಿ, ಬೆಳಕು, ಇಟ್ಟಿಗೆ, ಮರಳು ಸಿಮೇಂಟ್ ಇಲ್ಲದೆ ಮನೆಯನ್ನು ಕಟ್ಟುವ ಕಣ್ಣುಕಟ್ಟಿ ಕೈಯಲ್ಲಿ ಮನೆಯನ್ನು ಕಟ್ಟುವ
**ಸಿಬ್ಬಂದಿ:** ಕಣ್ಣು ಮುಚ್ಚಿ ಬಿಲ್ಡಿಂಗ್ ಕಟ್ಟುವ ಆಟ ಎನ್ನುತ್ತ ಹಾಡಿನಲ್ಲಿ ಹೇಳಿದಂತೆ ನಮ್ಮ ಕಣ್ಣಿಗೆ ಬಟ್ಟೆಕಟ್ಟಿ ಒಂದೆ ಕೈಯಿಂದ ಮರದ ತುಂಡುಗಳು ಹಾಗೂ ಬೆಂಕಿ ಪೊಟ್ಟಣಗಳಿಂದ ಒಂದರ ಮೇಲೆ ಒಂದರಂತೆ ಜೋಡಿಸಿ ಮನೆ ಕಟ್ಟುವ ಆಟ
**ಮಕ್ಕಳು :** ಅದು ಹೇಗೆ ಅಕ್ಕ ಕಟ್ಟೊದು? ನಾನು ನಿಮಗೆ 10 ಬೆಂಕಿಪೊಟ್ಟಣಗಳನ್ನು ಅಥವಾ ಮರದ ತುಂಡುಗಳನ್ನು ನೀಡುತ್ತೇನೆ
**ಸಿಬ್ಬಂದಿ:** ಸರಿ ನೀವೆಲ್ಲ ಅಂತರದಲ್ಲಿ ವೃತ್ತಕಾರದಲ್ಲಿ ಕುಳಿತು ಕೊಳ್ಳಿ ಎಲ್ಲಾರು ಆಡಬಹುದು
**ರಾಮು :** ನಾನು ಮೊದಲು ಆಡುವೆ ಅಕ್ಕ
**ಸಿಬ್ಬಂದಿ :** ಸರಿ ರಾಮುವಿನ ಕಣ್ಣಿಗೆ ಯಾರದರು ಬಟ್ಟೆಯನ್ನು ಕಟ್ಟಿ
**ಲತಾ :** ನಾನು ಬಟ್ಟೆ ಕಟ್ಟುತ್ತೇನೆ ಎಂದು ಬಟ್ಟೆ ಕಟ್ಟುತ್ತಾಳೆ
**ರಾಮು :** ಈಗಾ ಏನು ಮಾಡೊದು ಅಕ್ಕ ಏನು ಕಾಣುತ್ತಿಲ್ಲ.
**ಸಿಬ್ಬಂದಿ:** ರಾಮು ನಿನ್ನ ಎಡಗೈಯನ್ನು ಹಿಂದಕ್ಕೆ ಕಟ್ಟಿಕೋ ಈಗಾ ಬಲಗೈಯಿಂದ ಆ

ಬೆಂಕಿ ಪೊಟ್ಟಣಗಳನ್ನು ಒಂದರ ಮೇಲೊಂದರಂತೆ ಬಿಲ್ಡಿಂಗ್ ತರ ಕಟ್ಟಬೇಕು ನಿನಗೆ 5 ನಿಮಿಷ ಸಮಯ ಕೊಡುತ್ತೇನೆ

**ರಾಮು :** ಕಷ್ಟ ಜೋಡಿಸಲು ಆಗಲ್ಲ 3 ಬಾಕ್ಸ್ ಜೋಡಿಸುವೆ

**ಸಿಬ್ಬಂದಿ:** ಆಗುತ್ತೆ, ಬೇರೆ ಮಕ್ಕಳು ಆಗುತ್ತೆ ಮಾಡೋ ರಾಮು

ರಾಮು ಎಲ್ಲರ ಪ್ರೋತ್ಸಾಹದಿಂದ ಬಿಲ್ಡಿಂಗ್ ಕಟ್ಟಲು ಶುರು ಮಾಡಿದ ಹಾಗೂ 6 ಬೆಂಕಿ ಪೊಟ್ಟಣಗಳನ್ನು ಜೋಡಿಸಿದ. ಎಲ್ಲಾರು ಚಪ್ಪಾಳೆ ಹಾಕಿದರು

**ರೇಖಾ :** ನಾನು 10 ಬೆಂಕಿ ಪೊಟ್ಟಣಗಳನ್ನು ಜೋಡಿಸುತ್ತೇನೆ.

**ಸಿಬ್ಬಂದಿ :** ವೆರಿಗುಡ್

ರೇಖಾ ಎಲ್ಲ 10 ಬೆಂಕಿ ಪೊಟ್ಟಣಗಳನ್ನು ಜೋಡಿಸುವಳು ಅದು 4 ನಿಮಿಷದಲ್ಲಿ ಮಕ್ಕಳೆಲ್ಲ ಜೋರಾಗಿ ರೇಖಾ ಹೆಸರು ಕೂಗಿ ಖುಷಿ ಪಟ್ಟರು.

**ಸಿಬ್ಬಂದಿ:** ಈ ಆಟದಿಂದ ನೀವು ಏನು ಕಲಿತಿರಿ?

**ಕಲಿಕೆಯನ್ನು ಪ್ರೋತ್ಸಾಹಿಸಲು ಮಕ್ಕಳಿಗೆ ಕಿರುಬಹುಮಾನಗಳನ್ನು ನೀಡಿ**

- ಅಂಟುವ ಮತ್ತು ಹೊಳೆಯು ವಸ್ತುಗಳನ್ನು ನೀಡಿ
- ಮಕ್ಕಳಿಗೆ ಸಮಾಗ್ರಿಗಳನ್ನು ಹಂಚುವ ಮತ್ತು ಹಿಂಪಡೆಯುವ ಜವಾಬ್ದಾರಿಯನ್ನು ನೀಡಿ

**ಪುನಾರಾವರ್ತನೆ :** ವಾರಕ್ಕೆ ಒಮ್ಮೆ ಮಕ್ಕಳಿಗೆ ಮಾಡಿಸಬಹುದು ಮತ್ತು ಕಲಿಯುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳಿ



**ಚಟುವಟಿಕೆ 3 : ಕಡ್ಡಿಗಳ ಆಟ**

**ಉದ್ದೇಶಗಳು :**

- ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚುವುದು
- ಏಕಾಗ್ರತೆ ಹೆಚ್ಚುತ್ತದೆ
- ಕ್ರಿಯಾಶೀಲಗೊಳ್ಳುತ್ತಾರೆ

**ನಿರೀಕ್ಷಿತ ಫಲಿತಾಂಶಗಳು :**

- ಮಕ್ಕಳು ಏಕಾಗ್ರತೆಯಿಂದ ಓದುವರು
- ಮಕ್ಕಳು ಗೆಲ್ಲುವ ಛಲ ಹೊಂದುವರು
- ಸಮಸ್ಯೆಗಳ ಪರಿಹಾರ ಮಾಡುವ ಗುಣ ಬರುವುದು

**ಸೂಚಿತ ಗುಂಪು :** ಈ ಚಟುವಟಿಕೆಯನ್ನು 2 ರಿಂದ 5ನೇ ತರಗತಿ

**ಸಾಮಾಗ್ರಿ :** ಕಡ್ಡಿಗಳು.

**ಮಾದರಿ ಚಟುವಟಿಕೆ :**

**ಸಿಬ್ಬಂದಿ:** ಹಾಯ್ ಮಕ್ಕಳೇ, ಎಲ್ಲರು ಹೇಗಿದ್ದೀರಾ.?

**ಮಕ್ಕಳು :** ಚೆನ್ನಾಗಿದೇವೆ ಅಕ್ಕ

**ಸಿಬ್ಬಂದಿ :** ಇವತ್ತು ನಾನು ನಿಮಗೆ ಒಂದು ಆಟ ಆಡಿಸುತ್ತೇನೆ.

**ಮಕ್ಕಳು:** ಯಾವ ಆಟ?

**ಸಿಬ್ಬಂದಿ:** ಕಡ್ಡಿಗಳ ಆಟ

**ಮಕ್ಕಳು:** ಸರಿ, ಹೇಗೆ ಆಡೊದು?

**ಸಿಬ್ಬಂದಿ:** ನಾನು ನಿಮಗೆ 50 ಕಡ್ಡಿ ಸಮನಾಗಿರುವ ಹಾಗೆ ತುಂಡುಮಾಡಿ ನೀಡುವೆ ಅದರಲ್ಲಿ 2 ಕಡ್ಡಿಗಳನ್ನು ತೆಗೆದು ನಿಮಗೆ ನೀಡುವೆ, ಉಳಿದ 48 ಕಡ್ಡಿಗಳನ್ನು ನೆಲದ ಮೇಲೆ ಚೆಲ್ಲಿದಂತೆ ಹಾಕುತ್ತೇನೆ ಒಂದು ಕಡ್ಡಿಗೆ ಮತ್ತೊಂದು ಕಡ್ಡಿತಾಗದಂತೆ ತೆಗೆಯಬೇಕು ಸೋಕಿಸಿದರೆ ಔಟ್ ಆದಂತೆ

**ಮಗು:** ನಾನು ಮೊದಲು ಮಾಡುತ್ತೇನೆ

**ಸಿಬ್ಬಂದಿ :** ಆಟ ಶುರು ಮಾಡೋಣ ?

**ರಾಜು :** ಮೊದಲು ಪ್ರಯತ್ನಿಸಿದನು 15 ಕಡ್ಡಿಗಳನ್ನು ಬಿಡಿಸಿ ತೆಗೆದನು ನಂತರ ಔಟ್ ಆದನು

**ಸಿಬ್ಬಂದಿ:** ಸವಿತ ನೀನು ಮಾಡುವೆಯಾ?

**ಸವಿತಾ :** ಸರಿ, ಆಡುವೆ, ಸವಿತ 27 ಕಡ್ಡಿಗಳನ್ನು ತೆಗೆಯುವಳು ಎಲ್ಲ ಮಕ್ಕಳು ಚಪ್ಪಾಳೆ ಹಾಕಿದರು

**ಸಿಬ್ಬಂದಿ ;** ಗುಡ್, ಚೆನ್ನಾಗಿ ಆಡಿದಿರಿ ಏಕಾಗ್ರತೆಯಿಂದ ಆಡಿದರೆ ನೀವು ಎಲ್ಲ 48 ಕಡ್ಡಿಗಳನ್ನು ತೆಗೆಯಬಹುದು ಎನ್ನುತ ಚಪ್ಪಾಳೆ ಹಾಕುವರು

**ಮಕ್ಕಳನ್ನು ಪ್ರೋತ್ಸಾಹಿಸಲು ಗೆದ್ದವರಿಗೆ ಕಿರು ಬಹುಮಾನಗಳನ್ನು ನೀಡಿ**

- ಉಪಯೋಗಿಸಿದ ಸ್ಕೆಚ್ ಪೆನ್ನುಗಳನ್ನು ಪೈಪ್ ರೀತಿ ಬಳಸಲು ತಿಳಿಸಿ
- ಮಗುವಿಗೆ ಕಡ್ಡಿಗಳನ್ನು ಹಂಚಲು ಮತು ಹಿಂಪಡೆಯಲು ಅವಕಾಶ ನೀಡಿ

**ಪುನಾರಾವರ್ತನೆ :** ವಾರಕ್ಕೆ ಒಮ್ಮೆ ಮಕ್ಕಳಿಗೆ ಮಾಡಿಸಬಹುದು ಮತ್ತು ಅದರ ಉಪಯೊಗದ ಬಗ್ಗೆ ಖಾತರಿಪಡಿಸಿಕೊಳ್ಳಿ

## ಚಟುವಟಿಕೆ – 4 : ಅಕ್ಷರದಿಂದ ಪದ ರಚಿಸಿ

**ಉದ್ದೇಶಗಳು :**

- ಮಕ್ಕಳಲ್ಲಿ ಆಲೋಚನೆ ಶಕ್ತಿ ಹೆಚ್ಚುವುದು
- ಪದಗಳ ಪರಿಚಯ ಹೆಚ್ಚುತ್ತದೆ
- ಕ್ರಿಯಾಶೀಲಗೊಳ್ಳುತ್ತಾರೆ

**ನಿರೀಕ್ಷಿತ ಫಲಿತಾಂಶ :**

- ಮಕ್ಕಳು ಏಕಾಗ್ರತೆಯಿಂದ ಓದುವರು
- ಮಕ್ಕಳ ಭಾಷಾಜ್ಞಾನ ಹೆಚ್ಚುವುದು
- ಕಲಿಕಾ ಆಸಕ್ತಿ ಹೆಚ್ಚುವುದು

**ಸೂಚಿತ ಗುಂಪು :** 2 ರಿಂದ 3 ನೇ ತರಗತಿ

**ಬೇಕಾದ ಸಾಮಗ್ರಿಗಳು :**

ಕೆ.ಜಿ.ಹಾಳೆ, ಕಲರ್ ಪೆನ್, ಮಿಂಚು ಪಟ್ಟಿ

**ಮಾದರಿ ಚಟುವಟಿಕೆ**

**ಸಿಬ್ಬಂದಿ:** ಹಾಯ್ ಮಕ್ಕಳೇ ಹೇಗಿದ್ದೀರಾ?

**ಮಕ್ಕಳು :** ಚೆನ್ನಾಗಿದ್ದೇವೆ, ನಮಗೆಲ್ಲ ಒಂದು ಆಟ ಆಡಿಸಿ ಮಿಸ್

**ಸಿಬ್ಬಂದಿ :** ನಾನು ಇವತ್ತು ಒಂದು ಖುಷಿ ಬರೋ ಆಟ ಆಡಿಸುವೆ

**ಮಕ್ಕಳು :** ಸರಿ, ಆಡಿಸಿ

**ಸಿಬ್ಬಂದಿ:** ಅ.ಆ.ಇ.ಈ. ಕನ್ನಡದ ಅಕ್ಷರಮಾಲೆ ಎಂದು ಹಾಡು ಹೇಳಿಕೊಡುವರು, ಹಾಡು ಹೇಗಿತ್ತು?

**ಮಕ್ಕಳು :** ಚೆನ್ನಾಗಿತ್ತು

**ಸಿಬ್ಬಂದಿ:** ಅಕ್ಷರದಿಂದ ಪದಗಳನ್ನು ರಚಿಸುವ ಆಟ ಆಡೋಣವೇ?

**ಶಿವು :** ಹೇಗೆ ಆಡುವುದು?

**ಸಿಬ್ಬಂದಿ :** ಒಂದು ಕೆ.ಜಿ.ಹಾಳೆಯಲ್ಲಿ 'ಮ'ಎಂಬ ಅಕ್ಷರ ಬರೆದು ಇದು ಏನು ಎಂದು ಕೇಳುವರು ಮಕ್ಕಳು 'ಮ' ಅಕ್ಷರ ಎನ್ನುವರು .

ನಂತರ ಮಕ್ಕಳಿಗೆ ಒಂದೊಂದು ಮಿಂಚು ಪಟ್ಟಿ ನೀಡುತ್ತಾರೆ

**ರಫಿಕ್:** ನನಗೆ 'ಗು' ಎಂಬ ಮಿಂಚು ಪಟ್ಟಿ ಬಂದಿದೆ ಆಗ 'ಮ' ಜೋತೆ ಸೇರಿಸಿದರೆ 'ಮಗು' ಅನ್ನೊ ಪದ ಆಗುತ್ತೆ ಅಲ್ವ.

**ಸಿಬ್ಬಂದಿ :** ಗುಡ್

**ರೋಜಿ:** ನನಗೆ 'ರ' ಅನ್ನೂ ಮಿಂಚು ಪಟ್ಟಿ ಬಂದಿದೆ ಆಗಾ 'ಮರ' ಅನ್ನೋ ಪದ ಮಾಡಬಹುದು

**ಸಿಬ್ಬಂದಿ:** ವೆರಿಗುಡ್

ರಾಜ : ನನಗೆ 'ಳೆ' ಅನ್ನೂ ಮಿಂಚು ಪಟ್ಟಿ ಬಂದಿದೆ ಆಗಾ 'ಮಳೆ' ಅನ್ನೋ ಪದ ಮಾಡಬಹುದು

ಎಲ್ಲಾ ಮಕ್ಕಳು ತಮ್ಮ ಬಳಿ ಇರುವ ಮಿಂಚು ಪಟ್ಟಿಗಳನ್ನು ಬಳಸಿ ಪದಗಳನ್ನು ರಚಿಸಿದರು

**ಸಿಬ್ಬಂದಿ :** ಮಕ್ಕಳೆ ಆಟ ಚೆನ್ನಾಗಿತ್ತ?

**ಮಕ್ಕಳು:** ಚೆನ್ನಾಗಿತ್ತು

**ಸಿಬ್ಬಂದಿ :** ಹೀಗೆ ನೀವೆಲ್ಲ ವರ್ಣಮಾಲೆಯ ಇತರೆ ಅಕ್ಷರಗಳಿಗೂ ಪದಗಳನ್ನು ಹುಡುಕಿ ಬರೆಯಬಹುದು


**ಮಕ್ಕಳು :** ಸರಿ

**ಮಕ್ಕಳು :** ನಾವು ಬೇರೆಯವರಿಗೂ ಹೇಳಿಕೊಡುತ್ತೇವೆ ಧನ್ಯವಾದಗಳು

**ಮಕ್ಕಳನ್ನು ಪ್ರೋತ್ಸಾಹಿಸಲು ಕೆಲವು ಕಿರು ಬಹುಮಾನಗಳನ್ನು ನೀಡಿ**

- ಸುಳಿವು ಕಾರ್ಡ್‌ಗಳನ್ನು ಬಹುಮಾನವಾಗಿ ನೀಡಿ
- ಮಕ್ಕಳಿಗೆ ಅಕ್ಷರಗಳನ್ನು ಬರೆದು ಸುಳಿವು ನೀಡುವಂತೆ ಕಾರ್ಡ್‌ಗಳನ್ನು ನೀಡಿ

**ಪುನಾರಾವರ್ತನೆ :** ವಾರಕ್ಕೆ ಒಮ್ಮೆ ಮಕ್ಕಳಿಗೆ ಮಾಡಿಸಬಹುದು ಮತ್ತು ಲೆಕ್ಕ ಮತ್ತು ಮಗ್ಗಿ ಕಲಿಯುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳಿ



**ಚಟುವಟಿಕೆ 5 : ಆಟ ಆಡು ಲೆಕ್ಕ ಮಾಡು**

**ಉದ್ದೇಶಗಳು :**

- ಮಕ್ಕಳಲ್ಲಿ ಆಲೋಚನೆ ಶಕ್ತಿ ಹೆಚ್ಚುವುದು
- ಸಂಖ್ಯೆಗಳ ಪರಿಚಯ ಹೆಚ್ಚುತ್ತದೆ
- ಸರಳವಾಗಿ ಲೆಕ್ಕ ಮಾಡುವುದನ್ನು ಕಲಿಯುವರು

**ನಿರಿಕ್ಷಿತ ಫಲಿತಾಂಶ :**

- ಗಣಿತ ಲೆಕ್ಕದ ಭಯ ಹೋಗುವುದು
- ಮಕ್ಕಳ ಆತ್ಮವಿಶ್ವಾಸ ಹೆಚ್ಚುವುದು

**ಸೂಚಿತ ಗುಂಪು** : 3 ರಿಂದ 5 ನೇ ತರಗತಿ

**ಸಾಮಗ್ರಿಗಳು** : ಕೆ.ಜಿ.ಹಾಳೆ, ಕಲರ್ ಪೆನ್, ಪೇಪರ್ ಕಪ್‌ಗಳು .

**ಮಾದರಿ ಚಟುವಟಿಕೆ**

**ಸಿಬ್ಬಂದಿ:** ಹಾಯ್ ಮಕ್ಕಳೇ ಹೇಗಿದ್ದೀರಾ?
**ಮಕ್ಕಳು :** ಚೆನ್ನಾಗಿದ್ದೇವೆ, ಒಂದು ಆಟ ಆಡಿಸಿ ಅಕ್ಕ
**ಸಿಬ್ಬಂದಿ :** ನಾನು ಇವತ್ತು ಒಂದು ಲೆಕ್ಕದ ಆಟ ಆಡಿಸುವೆ
**ಮಕ್ಕಳು ;** ಲೆಕ್ಕ ಅಂದರೆ ಭಯ
**ಸಿಬ್ಬಂದಿ:** ಈ ಆಟದಿಂದ ನಿಮ್ಮ ಗಣಿತಜ್ಞಾನ ಹೆಚ್ಚುವುದು, ಮತ್ತು ಲೆಕ್ಕದ ಭಯ ಹೋಗುವುದು ಎನ್ನುತಾ 10 ಕೋಳಿಮರಿಗಳು ಮೇಯುತ್ತಿದ್ದವು ಗಿಡಗ ಬಂದು ಒಂದು ಹಕ್ಕಿ ಎತ್ತಿಕೊಂಡು ಹೋಯಿತು, ಎನ್ನುವ ಹಾಡನ್ನು ಹೇಳಿಕೊಟ್ಟರು
**ಮಕ್ಕಳು :** ಹಾಡು ಚೆನ್ನಾಗಿತ್ತು
**ಸಿಬ್ಬಂದಿ :** (ಒಂದು ದೊಡ್ಡ ಕೆ.ಜಿ.ಹಾಳೆಯಲ್ಲಿ ಹಲವು ಚಿಕ್ಕ-ಚಿಕ್ಕ ವೃತ್ತಗಳನ್ನು ಬರೆದು ಅದರೊಳಗೆ ಕೆಲವು ಅಂಕಿ ಸಂಖ್ಯೆಗಳನ್ನು ಬರೆದಿದ್ದರು)
**ಶಿವು :** ಏನು, ಇದು ಎಷ್ಟು ಸಂಖ್ಯೆ ಬರೆದಿದೆ? 4*4 ಎಂದು ಹೇಳುವನು
**ಸಿಬ್ಬಂದಿ :** ಗುಣಿಸಿದರೆ ಎಷ್ಟಾಗುವುದು?
**ಶಿವು :** ಯೋಚಿಸಿ 16
**ಸಿಬ್ಬಂದಿ :** ಚಿಕ್ಕ ಚಿಕ್ಕ ಪೇಪರ್ ಕಪ್‌ಗಳ ಮೇಲೆ ಉತ್ತರ ಬರೆದು ಇಟ್ಟಿದ್ದೇನೆ ಅದರಲ್ಲಿ 16 ಸಂಖ್ಯೆಯನ್ನು ಹುಡುಕಿ ಅದರ ಮೇಲೆ ಇಡು
**ಶಿವು ;** ಮಾಡಿದೆ ಅಕ್ಕ. ಎಲ್ಲ ಮಕ್ಕಳು ಚಪ್ಪಾಳೆ ಹಾಕಿದರು
**ರಾಧ :** ನಾನು ಮಾಡುವೆ 7*3 ಎಷ್ಟು?
**ಪಲ್ಲವಿ :** 21 ಅಲ್ವ, ನಾನು ಹುಡುಕಿ ಹಾಕುವೆ
ಆಗ ಎಲ್ಲ ಮಕ್ಕಳು ಚಪ್ಪಾಳೆ ಹಾಕುವರು. ನಂತರ ಮಕ್ಕಳಿಗೆ ಒಂದೊಂದು ಕಪ್‌ಗಳನ್ನು ನೀಡಿ ಕೆಜಿ ಹಾಳೆಯಲ್ಲಿ ಬರೆದಿರುವ ಮಗ್ಗಿಗೆ ಸರಿಹೊಂದುವ ಹಾಗೆ ಇಡಲು ಹೇಳಿದರು. ಎಲ್ಲಾ ಮಕ್ಕಳು ತಮ್ಮ ಬಳಿ ಇರುವ ಕಪ್‌ಗಳನ್ನು ಬಳಸಿ ಮಗ್ಗಿ ಬರೆದಿರುವ ವೃತ್ತದಲ್ಲಿ ಸರಿಯಾಗಿ ಆಲೋಚಿಸಿ ಇಟ್ಟರು

**ಸಿಬ್ಬಂದಿ :** ವೆರಿಗುಡ್ ಮಕ್ಕಳೆ, ಆಟ ಚೆನ್ನಾಗಿತ್ತ ?
**ಮಕ್ಕಳು:** ಚೆನ್ನಾಗಿತ್ತು.
**ಮಕ್ಕಳು :** ನಾವು ಬೇರೆಯವರಿಗು ಹೇಳಿಕೊಡುತ್ತೇವೆ ಧನ್ಯವಾದಗಳು
**ಮಕ್ಕಳು :** ಗುಣಾಕಾರದ ಲೆಕ್ಕ ಮಾಡಲು ಕಲಿತೆ ಮಗ್ಗಿ ಕಲಿತೆ

**ಮಕ್ಕಳನ್ನು ಪ್ರೋತ್ಸಾಹಿಸಲು ಕೆಲವು ಕಿರು ಬಹುಮಾನಗಳನ್ನು ನೀಡಿ**

- ಸರಿಮಾಡಿದ ಮಗುವಿಗೆ ಸಣ್ಣ ಮಗ್ಗಿ ಪುಸ್ತಕ ನೀಡಿ
- ಸುಳಿವಿರುವ 0 ಯಿಂದ 6 ರ ಸಂಖ್ಯೆಯ ಕಾರ್ಡಗಳನ್ನು ನೀಡಿ

**ಪುನಾರಾವರ್ತನೆ :** ವಾರಕ್ಕೆ ಒಮ್ಮೆ ಮಕ್ಕಳಿಗೆ ಮಾಡಿಸಬಹುದು ಮತ್ತು ಲೆಕ್ಕ ಮತ್ತು ಮಗ್ಗಿ ಕಲಿಯುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳಿ



# Domain - 4
# Learning and Communication Development

## Contents


| | |
|---|---|
| Domain 4 - Learning and Communication Development | 71 |
| Brief explanation with the significance of the domain | 71 |
| Activity 1- Framing own sentences using words | 71 |
| Activity 2 - Making pictures of animals and birds from letters | 74 |
| Activity 3 - Clap according to the number | 76 |
| Activity 4 - the Human body | 78 |
| Activity 5 - 7up game | 80 |


**Brief explanation with the significance of the domain**

Literacy and Communication development not only helps the child to improve his/her learning and communication level but also aids in learning difficult and different concepts in an easy way and communicating them to others. These play activities enhance thinking capacity and thereby creativity of the child resulting in improvisation of reading and writing skills.

## Activity - 1 : Framing own sentences using words

**Objectives :**

- To improve the grammar knowledge of children
- To enhance thinking skills and creativity in children
- To introduce new words and sentences to the children

**Expected Outcome :**

- Children are specialized in languages, mathematics and read well
- Children will show interest towards learning

**Target Group :** Grades 3 to 5

**Materials Required :** K.G.sheets, Marker, Note book, Pen, White paper, Pencil, Eraser, and a Sharpner

**How to perform the activity:**

**Staff:** Hi children, how are you all doing?
**Children:** We all are doing well. How have you been doing?
**Staff:** I am good, children. I am here today to make you play a game.

**Child 1:** Which game is it?

**Staff:** Conversation and learning to read and write through sentence framing

**Child 2:** Then I guess it would be in Kannada, am I correct?

**Staff:** Absolutely! Good, you guessed it right! This not only enhances your sentence framing skills, but also increases reading, writing, art, grammar, and language skills. come, let us begin the game.

**Children:** Okay

**Staff:** Well. Now I will keep a bowlful of chits where few words are written. You all should come one by one, pick a chit, and frame sentences based on the word written on it.

*(Children are enthusiastic and come forward to play the game)*

**Staff:** Fine, let Kamala play the game first, following her you all play one by one. You all will get your chances

*(Teacher gives the chit containing the word 'Teachers')*

**Teacher:** The word I got is 'Teachers' means, true guides, I love all of my teachers. I will frame the sentence with this word. Teachers teach lessons to us.

**Staff:** Very good! As you have observed we have learned the word 'Teacher' here. Let all of us applaud his effort.

**Rahim (child):** I have chosen the word 'Amma' and I will frame a sentence about it.

**Staff:** Good, waiting to listen to you.

**Rahim:** My amma makes food for me daily. Is this correct?

**Staff:** Well done. As we have seen here the word 'Amma' has been used in the sentence

**Inchara:** I will speak about plants and trees which are seen in our surrounding environment. as we all know, plants and trees give us good air and bring rain

**Staff:** Well framed, Inchara.

**Somu:** I will frame a sentence on the word 'Clock'

**Staff:** Okay, go for it.

**Somu:** Clock shows us the time of the day, am I correct?

**Staff:** Of course, you are! the clock shows us the time and punctuality is very much important in life. You framed the sentence very well. Let us applaud him.

**Staff:** Children, what did you learn from this game?

**Kamala:** I learned framing sentences using words

**Rahim:** I am introduced to a few words

**Inchara:** I had fun and it created interest in me to make sentences using different words

**Note for the Teacher:**

Write a few words and sentences and show it to the children. By doing this you can make the child more aware of words/ sentences. Tell them to create their own sentence using the words in their books. Make them pronounce words that are used on a daily basis and ask them to make sentences out of it.

**Rewards for the children who participate:**

- Giving them their favorite clue cards
- Asking them to find correct or incorrect sentences from the framed ones'

**When and how often:** once in a week and make sure that the children have learnt it.

## Activity -2 : Making Pictures of Animals and Birds from Letters

**Objectives :**

1. To enhance the thinking capacity and creativity
2. To introduce children to new letters and numbers
3. To make the children enjoy

**Expected Outcome :**

1. Children learn more letters/ characters
2. Children show interest in learning
3. Children are introduced to mathematical figures

**Target Group :** Grades 2 to 5

**Materials Required :** White sheet, Pen, Pencil, Crayons, Scissors, Paper, pre-written and painted KG sheets Pictures of Animals, Birds, House, Sun and others.

**How to perform the activity:**

**Staff:** Hi children, how are you all?
**Children:** We are doing well. How are you, ma'am?
**Staff:** I am doing good
**Sarita (Child 1):** please make us play a game
**Staff:** Oh!, you like to play a game. Okay, which one you would like to play?
**Ravi (Child 2):** Drawing images
**Staff:** Then let us play a special game which not only helps in improving your learning and communication but also enhances your creativity. draw pictures of Animals, Birds, Trees, and House using numbers, & letters, and describe the variations of the mathematical shapes such as Triangles, Circles, and Rectangles.
**Children:** How to play this game?
**Staff:** Ravi, can you please tell me any of your favorite alphabets from the Kannada language?
**Ravi:** the letter 'ಇ'
**Staff:** Okay, Ravi's favorite letter is 'ಇ'. You can draw a picture mouse from the letter 'ಇ'.
**Ravi:** How to draw Eyes, Nose, Mouth and, a tail for it?
*(The Staff draws the picture and asks the child to color it. Following*

*this, all the children enjoy drawing and coloring the pictures)*

**Staff:** Sarita, tell me any English letter

**Sarita:** my favorite letter is 'B'

**Staff:** Children, tell me what can be drawn from the letter 'B'

**Sarita:** Butterfly

**Staff:** Good, see I will draw Butterfly

*(The staff draws and colors it. Correspondingly the children follow it. Staff explains that different pictures can be drawn from letters such as Snake from the Kannada letter ಉ and Ladder and Flag from the English letter I and Pumpkin from the letter C)*

**Children:** Yes. It is interesting. We will also try

**Staff:** What are the shapes in mathematics?

*(Children randomly say Triangle, Circle, Rectangle, Square)*

**Staff:** The triangle has three sides and three angles from which the picture of the house can be drawn.

*Rectangle the four sides are uneven so that drawing can be drawn (Explain how an image of the sun/ clock can be drawn and make the children draw the images and let them color it.)*

**Children (claps):** Wow! It is too good. can we draw out of numbers

**Staff:** Yes, of course! say any number

**Rita:** 8

**Staff:** From 8, I will draw a doll image

**Rita:** I like dolls very much

*(Staff shows how to draw a doll image from the number 8 and they enjoy drawing and coloring activity)*

**Children:** Thanks. We all will try drawing different images for different characters

**Rewards for the children who participate:**

- Making pictures and giving them
- Providing pictures of animals and birds

**When and how often:** Make the children perform this activity once in a week and make sure that they have drawn pictures also from other letters.

## Activity - 3 : Clap According to the Number

**Objectives :**

1. To introduce the children the concept of even and odd numbers
2. To make them clap only after observing and to enhance their thinking skills and creativity
3. To make them learn about ascending and descending orders
4. To make them enjoy

**Expected Outcome :**

1. Children learn to appreciate mathematics
2. They will overcome the fear of mathematics
3. Listening increases and thereby they learn with joy

**Target Group :** Grades 1 to 3

**Materials Required :** Writing different numbers on KG cardboard sheets

**How to perform the activity:**

**Staff:** Hi children, how are you all?

**Children:** Hi, we are doing good

**Staff:** Okay, fine. children, let me know which subjects are difficult is difficult for you to read, write or learn

**Children:** I am afraid of maths. It is very difficult to learn

**Staff:** Okay then, shall we play a maths game

**Children:** Okay. but, what game is it?

**Staff:** The game is called 'Claps'. In this game, you all not only learn the numbers but also it makes your hands' nerves more active. In addition, it improves your ability to listen

**Children:** Okay. Let us play then

**Staff:** Fine. Now I will show some numbers written on the KG sheets. You all should watch, observe, and should clap accordingly. And children, there are two types of numbers, one is even and the other one is an odd number.

**Pallavi:** What is an even number?

**Ravi:** Hey, don't you know that? The numbers which are divisible from two are even numbers

**Peter:** The numbers which cannot be divided from two are called odd

numbers. for eg: 3,5,7 and 9

**Staff:** Good children. Now, I will show some even numbers. You have to tell the number and clap accordingly.

**Ravi:** I will play first

**Staff :** show the card bearing the numbers 2,4 and 6

**Ravi:** I know this (loudly). These are even numbers *(and he claps 2,4, and 6 times respectively)*

**Staff:** Children, did anyone observe one interesting thing here, anybody did notice that?

**Ayesha:** Yes. Here the numbers are in ascending order I mean it starts with a small number and follows

**Staff:** Very good! Shall we continue the game?

**Children:** Okay

*(Staff shows the written number 5,3, and 1 and asks who will be playing next)*

**Mary:** these are odd numbers and they are in descending order which means it starts with big numbers and continues accordingly.

*(In this way, the children clapped for different numbers)*

*(Staff made the children play rain clapping also. In addition, 12345 and 54321 clapping games were also played)*

**Staff:** What did you learn from this game?

**Children:** we learned how to listen, observe and, respond carefully. and now onwards we will neither hesitate nor fear to do maths problems.

**Rewards for the children who participate :**

- Giving children an equal number of clue cards
- Giving, distributing and collecting beads

**When and how often:** Once in a week

## Activity - 4 : The Human Body

Draw a picture of a human body, identify the main parts of the body and state their functions

**Objectives :**

- To enhance the thinking capacity and creativity
- To introduce children to the parts of the body
- To make them masters in science related drawings
- To make them enjoy learning

**Expected Outcome :**

- The children will learn to appreciate science
- The children will know the importance of human body parts

**Target Group :** between grades 3 to 4

**Materials Required :** Human body chart, KG sheets, Pencil, Eraser, and a Sharpener

**How to perform the activity:**

**Staff:** How are all doing, Children?

**Children:** Namaste ma'am. We are doing well.

**Staff:** Today shall I teach you drawing games?

**Children:** What drawing. We are able to just draw House, Mountain, Sun and, peacock

**Staff:** Good, But, let us look into that later. Now, we can focus on drawing our own image.

**Children:** Drawing our own image?! sounds interesting, But, why should we have to draw our own image?

**Staff:** Drawing our own image helps us to know what human body organs are, their functions and their importance. And also it improves your drawing skills

**Children:** Okay. We will keep a white paper, pencil, eraser and a sharper ready

**Staff:** First, close your eyes, imagine your body organs and then draw the same

**Children:** We have Eyes, Nose, Mouth, Ears, Neck, Shoulders, Hands, Legs and, Stomach. and inside the body, we have Brain, Heart, Lungs, Kidneys.

**Staff:** That's great, but for today you have to draw only five senses of the body

**Children:** What are those five senses?

**Staff:** The five senses are the eyes, nose, ears, mouth, and skin now write a picture of the five organs and identify their uses

**Ears and eyes:** There are two eyes and two ears in the face and those are needed to see and hear respectively

**Nose:** The nose is on the face which helps us to breathe, and smell.

**Mouth:** Is on the face. Functions are: speaking and having food.

**Skin:** It covers our body and helps us to know touch and feel

**Staff:** You all have learned many things

now, draw all these five senses and let us see who draws the best.

**Children:** Okay, we will draw

All children draw pictures of the human body and identify the five senses

**Rewards for the children who participate:**

- Giving picture cards of the human body
- Encouraging writing and coloring of all the different part of the human body

**When and how often:** Once in fore-night and make sure that the children are learning the new concepts.

## Activity - 5 : 7 Up Game

**Objectives :**

1. To enhance the thinking capacity and creativity of the children
2. To introduce children to the tables
3. To increase the urge to win and concentration
4. To make the children enjoy

**Expected Outcome :**

1. Children will be active in the classroom throughout the class
2. Children will learn tables and do counting
3. Children will think before speaking

**Target Group :** This activity can be taught to the children studying between grades 2 to 4

**Materials :** Clock to teach punctuality

**How to perform the activity:**

**Staff:** Namaste children, how you all have been doing?

**Children:** Namaste, ma'am. We are doing well.

**Staff:** Good! Shall we all play a game today?

**Children:** Wow! We are ready, ma'am *(Children are very much enthusiastic)*

**Staff:** Good, come, let us play

**Children:** Which game we are playing?

**Staff:** The game is called '7 Up'

**Children:** How to play this game?

*(Children were made to stand in a circle and the rule of the game was explained to them. According to the rule children were supposed to say 1, 2, 3 till 6 in a row but the 7th kid should not tell the number 7, instead he/she is supposed to put his hands on his/her head. If the child tells the number, he is considered as out.)*

**Children:** Wow! please let us play. (shouts in one voice)

*(Children started playing games with the guidance of the staff. The game started with the first child saying '1' and it continued till 7. When Madhu's turn came, he raised his and kept it over his head as per the game's rule. The game continued with children saying the numbers. When Rani's turn came, she was supposed to keep her hand on her*

*head. instead, she stood simply. other children teased Rani saying 'Rani lost the game'*

**Staff:** No children, the loser should not be teased. Instead, they should be encouraged by giving another opportunity

*(Ramu said the number 21 once it was stopped for 20.)*

Children opined the following after the game

a. It taught table 7 and also the keen listening

b. I enjoyed it

c. It taught us the lesson that we should have intransigence to win

**Staff:** You all are very intelligent! You know we can play this game with different tables and by doing so you can learn tables easily and at the same time, it enhances your concentration power.

**Rewards for the children who participate:**

- Asking the child to count the group of children
- Giving children pictures of animals, birds, and flowers



# ಸ್ಥಂಭ : 4 – ಕಲಿಕೆ ಮತ್ತು ಸಂವಹನಾ ಅಭಿವೃದ್ದಿ (ಸಿ.ಎಲ್.ಡಿ.)

## ಪರಿವಿಡಿ


ಸ್ಥಂಭ : 4 – ಕಲಿಕೆ ಮತ್ತು ಸಂವಹನಾ ಅಭಿವೃದ್ಧಿ (ಸಿ.ಎಲ್.ಡಿ.) 82

ಕಿರುಪರಿಚಯ 82

ಚಟುವಟಿಕೆ–1 : ಪದಗಳ ಮೂಲಕ ಸ್ವಂತ ವಾಕ್ಯ ರಚಿಸು 82

ಚಟುವಟಿಕೆ–2 : ಅಕ್ಷರಗಳು ಹಾಗೂ ಸಂಖ್ಯೆಗಳಿಂದ ವಿವಿಧ ಪ್ರಾಣಿಗಳು, ಪಕ್ಷಿಗಳು, ಆಕೃತಿ ರಚಿಸುವಾಟ 85

ಚಟುವಟಿಕೆ–3 : ಸಂಖ್ಯೆಗೆ ಅನುಗುಣವಾಗಿ ಚಪ್ಪಾಳೆ ಹಾಕಿಸುವುದು 87

ಚಟುವಟಿಕೆ–4 : ಮನುಷ್ಯನ ದೇಹದ ಚಿತ್ರ ಬರೆದು 5 ಅಂಗಗಳನ್ನು ಗುರ್ತಿಸಿ ಅವುಗಳ ಕಾರ್ಯಗಳನ್ನು ಹೇಳಿ 89

ಚಟುವಟಿಕೆ–5 : ಸೆವನ್‌ಅಪ್ ಆಟ 91


**ಕಿರು ಪರಿಚಯ :**

ಕಲಿಕೆ ಮತ್ತು ಸಂವಹನಾ ಅಭಿವೃದ್ದಿಯು ಮಗುವಿನ ಕಲಿಕಾ ಮಟ್ಟ ಮತ್ತು ಸಂವಹನಶೀಲತೆಯ ಪ್ರಗತಿಕಾಣಲು ಪೂರಕವಾಗುವುದು ಹಾಗೂ ಮಗುವಿಗೆ ಕಷ್ಟಕರವಾದ ಕಲಿಕಾಂಶಗಳನ್ನು ಸರಳವಾಗಿ ಕಲಿಯಲು ಮತ್ತು ಮಾತನಾಡಲು, ಕಲಿತದ್ದನ್ನು ಬೇರೆಯವರಿಗೆ ತಿಳಿಸಲು ಮಗುವಿಗೆ ಈ ಸ್ಥಂಭವು ನೆರವಾಗುವುದು. ಆಲೋಚನೆ ಮತ್ತು ಅದಕ್ಕೆ ತಕ್ಕ ಕ್ರಿಯಶೀಲತೆ ಹೆಚ್ಚಾಗಿ ಉತ್ತಮವಾಗಿ ಓದಲು ಬರೆಯಲು ಮಗುವಿಗೆ ಈ ಸ್ಥಂಭದ ಚಟುವಟಿಕೆಗಳು ಸಹಕಾರಿಯಾಗಬಲ್ಲವು.

### ಚಟುವಟಿಕೆ – 1 : ಪದಗಳ ಮೂಲಕ ಸ್ವಂತ ವಾಕ್ಯ ರಚಿಸು

**ಉದ್ದೇಶ :**

- ಮಕ್ಕಳಿಗೆ ವ್ಯಾಕರಣ ಜ್ಞಾನ ಹೆಚ್ಚಿಸುತ್ತದೆ
- ಮಕ್ಕಳಲ್ಲಿ ಆಲೋಚನೆ ಮತ್ತು ಕ್ರಿಯಶೀಲತೆ ವೃದ್ಧಿಸುವುದು
- ಹೊಸ ಪದ ಮತ್ತು ವಾಕ್ಯಗಳ ಪರಿಚಯವಾಗುವುದು

**ನಿರೀಕ್ಷಿತ ಫಲಿತಾಂಶ:**

- ಮಕ್ಕಳು ಭಾಷೆಗಳು ಹಾಗೂ ಗಣಿತ ವಿಷಯದಲ್ಲಿ ಪರಿಣತಿ ಪಡೆದು ಉತ್ತಮವಾಗಿ ಓದುವರು
- ಕಲಿಕೆಯಲ್ಲಿ ಮಕ್ಕಳು ಆಸಕ್ತಿವಹಿಸುವರು

**ಸೂಚಿತ ಗುಂಪು :** ಈ ಚಟುವಟಿಕೆಯನ್ನು 3 ರಿಂದ 5 ನೇ ತರಗತಿ

**ಸಾಮಾಗ್ರಿಗಳು :** ಕೆ.ಜಿ. ಹಾಳೆ, ಮಾರ್ಕರ್, ನೋಟ್ ಬುಕ್, ಪೆನ್ನು, ಬಿಳಿ ಹಾಳೆ, ಪೆನ್ಸಿಲ್, ಮೆಂಡರ್, ಶಾರ್ಪ್‌ನರ್

**ಸಿಬ್ಬಂದಿ:** ಹಾಯ್ ಮಕ್ಕಳೇ ಚೆನ್ನಾಗಿದ್ದೀರಾ ?
**ಮಕ್ಕಳು :** ನಾವು ಚೆನ್ನಾಗಿದ್ದೇವೆ. ನೀವು ಚೆನ್ನಾಗಿದ್ದೀರಾ ಅಣ್ಣ?
**ಸಿಬ್ಬಂದಿ :** ಚೆನ್ನಾಗಿದ್ದೆನೆ  ನಾನು ಇವತ್ತು ನಿಮಗೆ  ಒಂದು ಆಟ ಆಡಿಸಲು ಬಂದಿರುವೆ
**ಮಗು :** ಅದು ಯಾವ ಆಟ?
**ಸಿಬ್ಬಂದಿ :** ಮಕ್ಕಳಲ್ಲಿ ಕಲಿಕೆ ಮತ್ತು ಸಂವಹನಾ ಅಭಿವೃದ್ಧಿ ಮಾಡುವ ಪದಗಳ ಮೂಲಕ ವಾಕ್ಯ ರಚನೆಯ ಆಟ
**ಮಗು:** ಪದಗಳ ಮೂಲಕ ವಾಕ್ಯ ರಚನೆ ಅಂದರೆ ಕನ್ನಡ ಪಾಠದಲ್ಲಿರತ್ತೆ ಅಲ್ಲವೆ ?
**ಸಿಬ್ಬಂದಿ:** ಹೌದು ಗುಡ್, ಇದರಿಂದ ನಿಮ್ಮ ವಾಕ್ಯ ರಚಿಸುವ ಓದುವ, ಬರೆಯುವ, ಕಲೆ ಹೆಚ್ಚಿ, ವ್ಯಾಕರಣ, ಭಾಷಾಜ್ಞಾನ ಹೆಚ್ಚುವುದು. ಈಗ ಆಟ ಆಡೋಣವಾ?
**ಮಕ್ಕಳು:**  ಆಯ್ತು ಅಣ್ಣ
**ಸಿಬ್ಬಂದಿ :** ವೆರಿ ಗುಡ್, ಈಗ ನಾನು ಕೆಲವು ಪದಗಳನ್ನು ಬರೆದ ಚೀಟಿಗಳನ್ನು ನಿಮ್ಮ ಮುಂದೆ ಇಡುವೆ ನೀವು ಒಬ್ಬೊಬ್ಬರಾಗಿ ಬಂದು ಒಂದು ಚೀಟಿ ತೆರೆದು ನೋಡಿ ಆ ಪದಗಳಿಗೆ  ವಾಕ್ಯ ರಚಿಸಿ.
**ಮಕ್ಕಳು :** ನಾನು ಮೊದಲು, ನಾನು ಮೊದಲು ಎನ್ನುವರು
**ಸಿಬ್ಬಂದಿ:** ಸರಿ, ಕಮಲ ಮೊದಲು ಮಾಡಲಿ ಎಲ್ಲರಿಗು ಅವಕಾಶ ಸಿಗುವುದು ಎಂದು 'ಶಿಕ್ಷಕರು' ಎಂಬ ಪದವಿರುವ ಮಿಂಚು ಪಟ್ಟಿ ನೀಡಿದರು
**ಕಮಲ :** ಶಿಕ್ಷಕರು ಅಂದರೆ ನಮ್ಮ ಗುರುಗಳು ನನಗೆ ತುಂಬಾ ಇಷ್ಟ ಇವರನ್ನು  ಕುರಿತು ವಾಕ್ಯ ಮಾಡುವೆ ನಮಗೆ ಪಾಠ ಹೇಳಿಕೊಡುವರು.
**ಸಿಬ್ಬಂದಿ :** ವೆರಿಗುಡ್ ಈ ವಾಕ್ಯದಲ್ಲಿ ಶಿಕ್ಷಕರು ಎಂಬ ಪದ ಬಂತಲ್ಲವೆ? ಒಂದು ಚಪ್ಪಾಳೆ ಹಾಕೋಣ
**ರಹಿಮ್ (ಮಗು)  :** ಅಮ್ಮ ಇದರಲ್ಲಿ ವಾಕ್ಯ ಮಾಡುವೆ
**ಸಿಬ್ಬಂದಿ:** ಸರಿ ವಾಕ್ಯ ಮಾಡು ನೋಡೋಣ
**ರಹೀಮ್ :** ನನ್ನ ಅಮ್ಮ ನನಗೆ ದಿನಾಲೂ ತಿಂಡಿ ಮಾಡಿಕೊಡುವಳು ಸರಿ ಇದ್ದೀಯಾ?
**ಸಿಬ್ಬಂದಿ :**  ಸರಿಯಾಗಿದೆ ಈ ವಾಕ್ಯದಲ್ಲಿ ಅಮ್ಮ ಅನ್ನೋ ಪದ ಬಂದಿದೆ
**ಇಂಚರ :** ನಾನು ಪರಿಸರದಲ್ಲಿ, ಸಿಗುವ ಮರಗಿಡಗಳು ಎಂಬ ಪದ ಬಳಸಿ ವಾಕ್ಯ ಮಾಡುವೆ ಅಣ್ಣ, ಮರ ಗಿಡಗಳು ನಮಗೆ ಉತ್ತಮ ಗಾಳಿ ನೀಡಿ ಮತ್ತು ಮಳೆ ತರಿಸುತ್ತದೆ
**ಸಿಬ್ಬಂದಿ :** ಚೆನ್ನಾಗಿ ವಾಕ್ಯ ಮಾಡಿರುವೆ ಒಂದು ಚಪ್ಪಾಳೆ ಹಾಕೋಣ
**ಸೋಮು :** ನಾನು ಗಡಿಯಾರದ ಬಗ್ಗೆ  ವಾಕ್ಯ ಮಾಡುವೆ
**ಸಿಬ್ಬಂದಿ :** ಗುಡ್
**ಸೋಮು :** ಗಡಿಯಾರ ನಮಗೆ ಸಮಯವನ್ನು ತೋರಿಸುತ್ತದೆ. ಸರಿ ಅಲ್ವ ಅಣ್ಣ?
**ಸಿಬ್ಬಂದಿ :** ನಿಜ ನಮಗೆ ಗಡಿಯಾರ ಸಮಯವನ್ನು ತಿಳಿಸುವುದು ಹಾಗೂ ಸಮಯ ಪಾಲನೆ ಬಹಳ ಮುಖ್ಯ, ಗುಡ್.
ಚೆನ್ನಾಗಿ ವಾಕ್ಯ ಮಾಡಿರುವೆ ಒಂದು ಚಪ್ಪಾಳೆ ಹಾಕೋಣ

**ಸಿಬ್ಬಂದಿ :** ಈ ಆಟದಿಂದ ಏನು ಕಲಿತಿರಿ ?
**ಕಮಲ :** ನಾನು ಪದಗಳಿಂದ ವಾಕ್ಯರಚಿಸುವುದನ್ನು ಕಲಿತೆ
**ರಹೀಮ್ :** ನನಗೆ ಪದಗಳ ಪರಿಚಯವಾಯಿತು
**ಇಂಚರ :** ನನಗೆ ಖುಷಿಯಾಯಿತು ಹಾಗೂ ಬೇರೆ–ಬೇರೆ ಪದ ಬಳಸಿ ವಾಕ್ಯ ರಚಿಸಲು ಆಸಕ್ತಿ ಬಂತು


**ಶಿಕ್ಷರ ಗಮನಕ್ಕೆ**

ಮಕ್ಕಳಿಗೆ ಕೆಲವು ಪದ ಮತ್ತು ವಾಕ್ಯಗಳನ್ನು ಬರೆದು ತೋರಿಸಿ ಆಗ ಮಕ್ಕಳಿಗೆ ಹೆಚ್ಚು ಅರಿವು ಬರುವುದು, ತಮ್ಮ ಪುಸ್ತಕಗಳಲ್ಲಿನ –ಗದ್ಯ–ಪದ್ಯ ಗಳನ್ನು ತಿರಿವಿ ಪದಗಳನ್ನು ಆರಿಸಿ ಅವನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಲು ಹೇಳಿ, ಕೆಲವು ದಿನನಿತ್ಯ ಬಳಸುವ ಪದಗಳನ್ನು ಅವರಿಂದಲೇ ಹೇಳಿಸಿ ವಾಕ್ಯರಚಿಸಲು ಹೇಳಿ.

**ಮಕ್ಕಳಿಗೆ ಪ್ರೋತ್ಸಾಹಿಸಲು ಸಣ್ಣ ಪುಟ್ಟ ಬಹುಮಾನ ನೀಡಿ :**

- ಅವರಿಗೆ ಇಷ್ಟವಾದ ಮಿಂಚು ಪಟ್ಟಿಗಳನ್ನು ನೀಡಿ
- ಮಕ್ಕಳನ್ನು ರಚಿತವಾದ ವಾಕ್ಯದಲ್ಲಿ ಸರಿ, ತಪ್ಪುಗಳನ್ನು ಗುರ್ತಿಸಲು ತಿಳಿಸಿ

**ಪುನಾರಾವರ್ತನೆ:** ವಾರಕ್ಕೆ ಒಮ್ಮೆ ಈ ಚಟುವಟಿಕೆ ಮಾಡಿಸಬಹುದು ಮತ್ತು ಮಕ್ಕಳು ಕಲಿತಿರುವ ಬಗ್ಗೆ ಖಾತರಿಮಾಡಿಕೊಳ್ಳಿ



Year : 2019
Place : GHPS, N.H.Palya
Activity : Framing own sentences using words

## ಚಟುವಟಿಕೆ – 2 : ಅಕ್ಷರಗಳು ಹಾಗೂ ಸಂಖ್ಯೆಗಳಿಂದ ವಿವಿಧ ಪ್ರಾಣಿಗಳು, ಪಕ್ಷಿಗಳು, ಆಕೃತಿ ರಚಿಸುವಾಟ

**ಉದ್ದೇಶ :**

- ➢ ಮಕ್ಕಳಲ್ಲಿ ಆಲೋಚನೆ ಮತ್ತು ಕ್ರಿಯಶೀಲತೆ ವೃದ್ಧಿಸುವುದು
- ➢ ಮಕ್ಕಳಲ್ಲಿ ಅಕ್ಷರಗಳು ಮತ್ತು ಸಂಖ್ಯೆಗಳ ಪರಿಚಯವಾಗುವುದು
- ➢ ಮಕ್ಕಳು ಖುಷಿ ಪಡುವರು

**ನಿರೀಕ್ಷಿತಫಲಿತಾಂಶ:**

- ➢ ಮಕ್ಕಳು ಹೆಚ್ಚು ಹೆಚ್ಚು ಅಕ್ಷರಗಳನ್ನು ಕಲಿಯುವರು
- ➢ ಕಲಿಕೆಯಲ್ಲಿ ಮಕ್ಕಳು ಆಸಕ್ತಿವಹಿಸುವರು
- ➢ ಗಣಿತದ ಆಕೃತಿಗಳ ಪರಿಚಯವಾಗುವುದು

**ಸೂಚಿತ ಗುಂಪು** : 2 ರಿಂದ 5 ನೇ ತರಗತಿ

**ಬೇಕಾಗುವ ಸಾಮಾಗ್ರಿಗಳು** : ಬಿಳಿಹಾಳೆ, ಪೆನ್, ಪೆನ್ಸಿಲ್, ಕ್ರಯೋನ್ಸ್, ಕತ್ತರಿ, ಹಾಳೆ, ಮೊದಲೆ ಬರೆದು ಇಟ್ಟಿರುವ ಚಿತ್ತಾರ ಬಿಡಿಸಿದ ಕೆ.ಜಿ.ಹಾಳೆಗಳು, ಹಂತ ಹಂತವಾಗಿ ಬಿಡಿಸಿ ವಿವರಿಸಿದ ಚಿತ್ರಗಳು ಪ್ರಾಣಿ, ಪಕ್ಷಿ, ಮನೆ, ಸೂರ್ಯ ಇತರೆ

**ಮಾದರಿ ಚಟುವಟಿಕೆ**

**ಸಿಬ್ಬಂದಿ:** ಹಾಯ್ ಮಕ್ಕಳೇ ಹೇಗಿದ್ದೀರಾ?
**ಮಕ್ಕಳು :** ನಾವು ಚೆನ್ನಾಗಿದ್ದೇವೆ. ನೀವು ಚೆನ್ನಾಗಿದ್ದೀರಾ ಮಿಸ್ ?
**ಸಿಬ್ಬಂದಿ :** ಚೆನ್ನಾಗಿದ್ದೇನೆ
**(ಮಗು) ಸರಿತ :** ನಮಗೆ ಒಂದು ಆಟ ಆಡಿಸಿ
**ಸಿಬ್ಬಂದಿ :** ಯಾವ ಆಟ ಆಡಿಸಲಿ ನಿಮಗೆ?
**ರವಿ(ಮಗು) :** ಚಿತ್ರ ಬರೆಯೊ ಆಟ ಆಡಿಸಿ
**ಸಿಬ್ಬಂದಿ :** ಹಾಗಾದರೆ ಒಂದು ವಿಶೇಷವಾದ ಆಟ ಆಡಿಸುವೆ ಇದು ನಿಮ್ಮ ಕಲಿಕೆ ಮತ್ತು ಸಂವಹನದ ಅಭಿವೃದ್ದಿ ಮಾಡುವುದು, ಕ್ರಿಯಾಶೀಲತೆ, ಸೃಜನಶೀಲತೆ ಹೆಚ್ಚಿಸುವುದು. ಸಂಖ್ಯೆ, ಹಾಗು ಅಕ್ಷರಗಳನ್ನು ಬಳಸಿ ಪ್ರಾಣಿ,ಪಕ್ಷಿ, ಮರ, ಮನೆಗಳ ಚಿತ್ರಬಿಡಿಸಿ ಹಾಗೂ ಗಣಿತದ ವಿವಿಧ ಆಕಾರಗಳಾದ ತ್ರಿಭುಜ, ವೃತ್ತ, ಆಯತ, ಚೌಕ, ಬರೆಸಿ ಅವುಗಳ ವ್ಯತ್ಯಾಸಗಳನ್ನು ಹೇಳಬೇಕು ಹಾಗೂ ಚಿತ್ರ ಬರೆಯಬಹುದು
**ಮಕ್ಕಳು :** ಅದು ಹೇಗೆ, ಆಡೋದು ?
**ಸಿಬ್ಬಂದಿ :** ರವಿ ನಿನಗೆ ಇಷ್ಟವಾದ ಕನ್ನಡದ ಯಾವುದಾದರು ವರ್ಣಮಾಲೆ ಅಕ್ಷರ ಹೇಳುವೆಯಾ?
**ರವಿ :** ಮಿಸ್ 'ಇ' ಅಕ್ಷರ
**ಸಿಬ್ಬಂದಿ :** 'ಇ' ಅಕ್ಷರ ದಿಂದ 'ಇಲಿ' ಚಿತ್ರ ಬಿಡಿಸಬಹುದು
**ರವಿ :** ಹೇಗೆ? ಅದಕ್ಕೆ, ಕಣ್ಣು ಮೂಗು, ಬಾಯಿ ಬಾಲ ಎಲ್ಲಾ ಬರೆಯಬೇಕು ಅಲ್ವ?
**ಸಿಬ್ಬಂದಿ :** ಬರೆದು ತೋರಿಸುವುದು ಹಾಗೂ ಮಗುವಿಗೆ ಬಣ್ಣ ಹಚ್ಚಲು ಹೇಳುವುದು ಎಲ್ಲ ಮಕ್ಕಳು ಸಿಬ್ಬಂದಿ ಬರೆದ ಹಾಗೇ ಚಿತ್ರ ಬಿಡಿಸಿ ಬಣ್ಣ ಹಚ್ಚಿ ಖುಷಿ ಪಡುವರು

**ಸಿಬ್ಬಂದಿ :** ಸರಿತ ನೀನು ಇಂಗ್ಲೀಷ್ ವರ್ಣಮಾಲೆಯ ಯಾವುದಾದರು ಅಕ್ಷರ ಹೇಳು ?
**ಸರಿತ :** ಮಿಸ್ 'ಬಿ' ಅಕ್ಷರ
**ಸಿಬ್ಬಂದಿ :** 'ಬಿ' ಅಕ್ಷರ ದಿಂದ ಯಾವ ಚಿತ್ರ ಬಿಡಿಸಬಹುದು
**ಸರಿತ :** ಮಿಸ್ ಬಟರ್ ಫ್ಲೈ ಚಿತ್ರ ಬಿಡಿಸಿ ಮಿಸ್
**ಸಿಬ್ಬಂದಿ :** ಗುಡ್ ಬಿಡಿಸುವೆ ನೋಡಿ ಎನ್ನುತ್ತ ಚಿತ್ರ ಬಿಡಿಸಿ ಬಣ್ಣ ಹಚ್ಚುವರು ಮಕ್ಕಳು ತಾವು ಹಾಗೆ ಬರೆದು ಬಣ್ಣ ಹಚ್ಚುವರು ಖುಷಿಪಡುವರು
ಸಿಬ್ಬಂದಿ ಹೀಗೆ ವಿವಿಧ ಅಕ್ಷರಗಳನ್ನು ಬರೆದು ಚಿತ್ರ ಬಿಡಬಹುದು 'ಉ' ಇಂದ ಹಾವು ಇಂಗ್ಲೀಷ 'ಐ' ಇಂದ ಏಣಿ, 'ಸಿ' ಇಂದ ಕುಂಬಳಕಾಯಿ, ಇತರೆ ವಿವರಿಸಿ
ಹೌದು. ಚೆನ್ನಾಗಿದೆ ನಾವು ಬೇರೆ ಅಕ್ಷರಗಳಿಂದ ಚಿತ್ರ ಬರೆಯುವೆವು
**ಸಿಬ್ಬಂದಿ:** ಗಣಿತದಲ್ಲಿ  ಯಾವ ಆಕಾರಗಳಿವೆ
**ಮಕ್ಕಳು :** ಒಬ್ಬೊಬ್ಬರಾಗಿ ತ್ರಿಭುಜ, ವೃತ್ತ, ಆಯತ, ಚೌಕ, ಎಂದು ಹೇಳುವರು
**ಸಿಬ್ಬಂದಿ :** ತ್ರಿಕೋನಾದಲ್ಲಿ ಮೂರು ಬಾಹು, ಮೂರುಕೋನ ಸಮವಾಗಿವೆ ಇದರಿಂದ ಮನೆ ಚಿತ್ರ ಬರೆಯಬಹುದು
**ಆಯತ**–ನಾಲ್ಕು ಬಾಹು ಅಸಮಾನವಾಗಿವೆ ಇದರಿಂದ ಕಟ್ಟಡದ ಚಿತ್ರ ಬರೆಯಹುದು
ವೃತ್ತದಿಂದ ಸೂರ್ಯ, ಗಡಿಯಾರ ಹೀಗೆ ಬರೆಯಬಹುದು ಎಂದು ವಿವರಿಸಿ ಚಿತ್ರ ಬರೆದು ತೋರಿಸಿ ಮಕ್ಕಳಿಗೆ ಚಿತ್ರ ಬರೆಸಿ ಬಣ್ಣ ಹಚ್ಚಿಸಿ
**ಮಕ್ಕಳು:** ಚೆನ್ನಾಗಿದೆ ಎಂದು ಚಪ್ಪಾಳೆ ಹಾಕುವರು. ಹಾಗೆ ಸಂಖ್ಯೆಯಿಂದ ಚಿತ್ರ ಬಿಡಿಸಿ ಮಿಸ್
**ಸಿಬ್ಬಂದಿ :** ರೀಟಾ ನೀನು ಒಂದು ಸಂಖ್ಯೆ ಹೇಳು ?
**ರೀಟಾ :** 8 ಮಿಸ್
**ಸಿಬ್ಬಂದಿ :** 8 ರಿಂದ ನಾನು ನಿಮಗೆ ಗೊಂಬೆ ಚಿತ್ರ ಬರೆಸುವೆ
**ರೀಟಾ :** ಗೊಂಬೆ ಅಂದರೆ ನನಗೆ ಇಷ್ಟ ಬಿಡಿಸಿ ಮಿಸ್
**ಸಿಬ್ಬಂದಿ :** 8 ಸಂಖ್ಯೆಯಿಂದ ಗೊಂಬೆ ಚಿತ್ರ ಬಿಡಿಸುವುದನ್ನು ಹೇಳಿಕೊಡುವುದು ಮಕ್ಕಳು ಚಿತ್ರ ಬರೆದು ಬಣ್ಣ ಹಚ್ಚಿ ಖುಷಿ ಪಡುವರು
ಧನ್ಯವಾದಗಳು. ನಾವು ಬೇರೆ ಬೇರೆ ಅಕ್ಷರಗಳಿಗೆ ಚಿತ್ರ ಬಿಡಿಸುತ್ತೇವೆ.

**ಮಕ್ಕಳನ್ನು ಪ್ರೋತ್ಸಾಹಿಸಲು ಬಹುಮಾನಗಳನ್ನು ನೀಡಬಹುದು**

- ಚಿತ್ರಗಳನ್ನು ಮಾಡಿ ಮಕ್ಕಳಿಗೆ ನೀಡಿ
- ಮಕ್ಕಳಿಗೆ ಪ್ರಾಣಿಗಳ ಮತ್ತು ಪಕ್ಷಿಗಳ ಚಿತ್ರಗಳನ್ನು ನೀಡಿ

**ಪುನಾರಾವರ್ತನೆ :** ವಾರಕ್ಕೆ ಒಮ್ಮೆ ಮಕ್ಕಳಿಗೆ ಚಟುವಟಿಕೆ ಮಾಡಿಸಬಹುದು ಹಾಗೂ ಮಕ್ಕಳು ಇತರ ಅಕ್ಷರ ಆಕೃತಿಗಳಿಗೆ ಚಿತ್ರ ಬಿಡಿಸಿರುವ ಚಿತ್ರಗಳನ್ನು ಖಾತರಿಮಾಡಿ


Year : 2019
Place : GLPS, Ningarajanakatte
Activity : Making pictures of animals and birds from letters

## ಚಟುವಟಿಕೆ – 3 : ಸಂಖ್ಯೆಗೆ ಅನುಗುಣವಾಗಿ ಚಪ್ಪಾಳೆ ಹಾಕಿಸುವುದು

**ಉದ್ದೇಶಗಳು :**

- ಮಕ್ಕಳಿಗೆ ಸಮಸಂಖ್ಯೆ ಮತ್ತು ಬೆಸಸಂಖ್ಯೆಗಳ ಪರಿಚಯವಾಗುವುದು
- ನೋಡಿ ನಂತರ ಆಲೋಚಿಸಿ ಚಪ್ಪಾಳೆ ಹಾಕುವರು ಅವರ ಆಲೋಚನೆ ಮತ್ತು ಕ್ರಿಯಶೀಲತೆ ವೃದ್ಧಿಸುವುದು
- ಏರಿಕೆ ಮತ್ತು ಇಳಿಕೆ ಕ್ರಮದ ಬಗ್ಗೆ ತಿಳಿದುಕೊಳ್ಳುವರು
- ಮಕ್ಕಳು ಖುಷಿಪಡುವರು

**ನಿರೀಕ್ಷಿತ ಫಲಿತಾಂಶ :**

- ಮಕ್ಕಳು ಗಣಿತ ವಿಷಯದಲ್ಲಿ ಪರಿಣತಿ ಪಡೆವರು
- ಲೆಕ್ಕವೆಂದರೆ ಭಯ ಎಂಬ ಭಾವನೆ ಹೋಗುವುದು
- ಆಲಿಸುವಿಕೆ ಮತ್ತು ಪ್ರತಿಕ್ರಿಯೆ ಗುಣ ಹೆಚ್ಚಿ, ಲವಲವಿಕೆಯಿಂದ ಕಲಿಯುವರು

**ಸೂಚಿತ ಗುಂಪು :** 1 ರಿಂದ 3 ನೇ ತರಗತಿ

**ಸಾಮಾಗ್ರಿ :** ವಿವಿಧ ಅಂಕಿಗಳ ಚಿತ್ರಗಳು, ಬರೆದು, ಕೆ.ಜಿ.ಹಾಳೆಯಲ್ಲಿ ತೋರಿಸುವುದು

**ಮಾದರಿ ಚಟುವಟಿಕೆ**

**ಸಿಬ್ಬಂದಿ:** ಹಾಯ್ ಮಕ್ಕಳೇ ಹೇಗಿದ್ದೀರಾ ?
**ಮಕ್ಕಳು:** ಹಾಯ್ ಅಕ್ಕ ಚೆನ್ನಾಗಿದ್ದೇವೆ
**ಸಿಬ್ಬಂದಿ :** ನಿಮಗೆ ಯಾವ ವಿಷಯ ಓದಲು ಬರೆಯಲು ಕಲಿಯಲು ಕಷ್ಟ ?
**ಮಕ್ಕಳು :** ಗಣಿತ ಅಂದರೆ ಭಯ, ಕಲಿಯಲು ಕಷ್ಟ
**ಸಿಬ್ಬಂದಿ :** ಹಾಗಾದರೆ ನಾನು ಇವತ್ತು ನಿಮಗೆ ಒಂದು ಲೆಕ್ಕದ ಆಟ ಆಡಿಸಲಾ?
**ಮಕ್ಕಳು :** ಸರಿ. ಏನು ಆಟ?
**ಸಿಬ್ಬಂದಿ :** ಚಪ್ಪಾಳೆ ಆಟ ಅಂತಾ ಇದರಿಂದ ನಿಮಗೆ ಖುಷಿ. ಸಮ ಮತ್ತು ಬೆಸ ಸಂಖ್ಯೆಗಳ ಬಗ್ಗೆ ಕಲಿತು ಕೊಳ್ಳುವಿರಿ ಹಾಗೂ ಕೈಗಳ ನರಗಳು ಕ್ರಿಯಾಶೀಲಗೊಳ್ಳುತ್ತವೆ, ನಿಮ್ಮ ಆಲಿಸುವಿಕೆ ಗುಣ ಸಹಾ ಹೆಚ್ಚುತ್ತದೆ
**ಮಕ್ಕಳು :** ಹಾಗಾದರೆ ಆಡಿಸಿ
**ಸಿಬ್ಬಂದಿ :** ನಾನು ನಿಮಗೆ ಕೆ.ಜಿ. ಹಾಳೆಯಲ್ಲಿ ಬರೆದ ಅಕ್ಷರ ಅಥವಾ ಸಂಖ್ಯೆಗಳನ್ನು ತೋರಿಸುವೆ ಆಗಾ ನೀವು ಆ ಸಂಖ್ಯೆಗಳನ್ನು ನೋಡಿ ಅಥವಾ ಕೇಳಿ ಅದನ್ನು ಅನುಸರಿಸಿ ಚಪ್ಪಾಳೆ ಹಾಕಬೇಕು.
**ಸಿಬ್ಬಂದಿ :** ಸಂಖ್ಯೆಗಳಲ್ಲಿ 2 ವಿಧ ಇದೆ ಒಂದು ಸಮ ಸಂಖ್ಯೆ ಮತ್ತೊಂದು ಬೆಸ ಸಂಖ್ಯೆ
**ಪಲ್ಲವಿ (ಮಗು) :** ಸಮ ಸಂಖ್ಯೆ ಅಂದರೆ ಏನು ಅಣ್ಣ
**ರವಿ :** ಅಷ್ಟು ಗೊತ್ತಿಲ್ವ ಎರಡರಿಂದ ಭಾಗಮಾಡಲು ಆಗುವ ಸಂಖ್ಯೆಯ ಸಮ ಸಂಖ್ಯೆ ಉದಾ : 2, 4, 6, 8, 10,
**ಪೀಟರ್ :** ಹಾಗೆ ಬೆಸ ಸಂಖ್ಯೆ ಸಹಾ ಇವೆ ಅವು ಎರಡರಿಂದ ಬಾಗಿಸಲು ಆಗದ ಸಂಖ್ಯೆಗಳು ಉದಾ: 3,5,7,9
**ಸಿಬ್ಬಂದಿ :** ಜಾಣ ಮಕ್ಕಳು ನಾನು ಹೀಗೆ ಸಮ ಸಂಖ್ಯೆಗಳನ್ನು ತೋರಿಸುವೆ ಆಗಾ

ನೀವು ಆ ಸಂಖ್ಯೆ ಯಾವುದು ಎಂದು ಹೇಳಿ ಅಷ್ಟು ಸಂಖ್ಯೆಯ ಚಪ್ಪಾಳೆ ಹಾಕಿ

**ರವಿ :** ನಾನು ಮೊದಲು ಮಾಡುವೆ

**ಸಿಬ್ಬಂದಿ :** 2,4,6, ಸಂಖ್ಯೆಯ ಕಾರ್ಡ್ ತೋರಿಸುವರು

**ರವಿ :** ಜೋರಾಗಿ ನನಗೆ ಗೊತ್ತು ಇವು ಸಮ ಸಂಖ್ಯೆಗಳು ಎನ್ನುತ 2,4,6, ಚಪ್ಪಾಳೆ ಹಾಕುವನು ಎಲ್ಲರು ಕೈಜೋಡಿಸುವರು

**ಸಿಬ್ಬಂದಿ :** ಇದರಲ್ಲಿ ಇನ್ನೊಂದು ವಿಷಯ ಇದೆ ಎನು ಹೇಳಿ ?

**ಆಯಿಷಾ :** ಅಣ್ಣ ನಾನು ಹೇಳುವೆ ಇದು ಏರಿಕೆ ಕ್ರಮ ಅಂದರೆ ಚಿಕ್ಕ ಸಂಖ್ಯೆಯಿಂದ ದೊಡ್ಡ ಸಂಖ್ಯೆಯೆಡೆಗೆ ಎಣಿಸುವುದು

**ಸಿಬ್ಬಂದಿ :** ವೆರಿಗುಡ್ ಹೀಗಾ ಮುಂದೆ ಆಟ ಆಡೋಣವಾ

**ಮಕ್ಕಳು :** ಸರಿ

**ಸಿಬ್ಬಂದಿ :** ಅಕ್ಷರದಲ್ಲಿ ಬರೆದ 5, 3, 1 ಚಪ್ಪಾಳೆ ಸಂಖ್ಯೆ ತೋರಿಸುವರು. ಈಗಾ ಯಾರು ಮಾಡುವಿರಿ

**ಮೇರಿ :** ನಾನು ಮಾಡುವೆ

**ಮೇರಿ :** ಅಕ್ಕ ಇವು ಬೆಸ ಸಂಖ್ಯೆಗಳು ಹಾಗೂ ಇಳಿಕೆ ಕ್ರಮದಲ್ಲಿ ಇವೆ ದೊಡ್ಡ ಸಂಖ್ಯೆ ಯಿಂದ ಸಣ್ಣ ಸಂಖ್ಯೆಯೆಡೆಗೆ ಚಪ್ಪಾಳೆ ಹಾಕಬೇಕು. ಹೀಗೆ ಮಕ್ಕಳು ಬೇರೆ ಬೇರೆ ಸಂಖ್ಯೆಗಳಿಗೆ ತಕ್ಕ ಹಾಗೆ ಚಪ್ಪಾಳೆ ಹಾಕಿದರು


**ಸಿಬ್ಬಂದಿ :** ಮಕ್ಕಳಿಗೆ ಮಳೆ ಚಪ್ಪಾಳೆ ಆಟ ಸಹಾ ಆಡಿಸಿದರು 1, 2, 3, 4, 5 ಹಾಗು 5, 4, 3, 2, 1, ಹೀಗೆ ಬೆರಳುಗಳಿಂದ ಚಪ್ಪಾಳೆ ಹಾಕಿ ಖುಷಿಪಟ್ಟರು. ಮಕ್ಕಳೆ ನೀವು ಈ ಆಟದಿಂದ ಏನು ಕಲಿತಿರಿ?

**ಮಕ್ಕಳು :** ನಾವು ಚೆನ್ನಾಗಿ ಕೇಳಿಸಿ ಕೊಳ್ಳೋದು, ನೋಡಿದಾ ಹಾಗೆ ಮಾಡುವುದು, ಗಮನವಿಟ್ಟು ಕೇಳಿಸಿ, ಆಲಿಸಿ ಪ್ರತಿಕ್ರಿಯಿಸಿವುದು ಕಲಿತೆವು ಖುಷಿಯಾಯಿತು ಅಣ್ಣ ನಾವು ಇನ್ನು ಗಣಿತ ಲೆಕ್ಕ ಮಾಡಲು ಭಯಪಡೋಲ್ಲ.

**ಮಕ್ಕಳನ್ನು ಪ್ರೋತ್ಸಾಹಿಸಲು ಬಹುಮಾನಗಳನ್ನು ನೀಡಬಹುದು**

- ಮಕ್ಕಳಿಗೆ ಸಮ ಸಂಖ್ಯೆಯ ಮಿಂಚುಪಟ್ಟಿಯನ್ನು ನೀಡಿ
- ಕಾರ್ಡಗಳನ್ನು ಹಂಚಲು ಮತ್ತು ಸಂಗ್ರಹಿಸಲು ಜವಾಬ್ದಾರಿಯನ್ನು ನೀಡಿ

**ಪುನಾರಾವರ್ತನೆ :** ವಾರಕ್ಕೆ ಒಮ್ಮೆ ಮಕ್ಕಳಿಗೆ ಚಟುವಟಿಕೆ ಮಾಡಿಸಬಹುದು ಹಾಗೂ ಮಕ್ಕಳು ಕಲಿಯುವ ಬಗ್ಗೆ ಖಾತರಿಮಾಡಿಕೊಳ್ಳಿ



**ಚಟುವಟಿಕೆ – 4 : ಮನುಷ್ಯನ ದೇಹದ ಚಿತ್ರ ಬರೆದು 5 ಅಂಗಗಳನ್ನು ಗುರ್ತಿಸಿ ಅವುಗಳ ಕಾರ್ಯಗಳನ್ನು ಹೇಳಿ**

**ಉದ್ದೇಶಗಳು :**

- ಮಕ್ಕಳಲ್ಲಿ ಆಲೋಚನೆ ಮತ್ತು ಕ್ರಿಯಶೀಲತೆ ವೃದ್ಧಿಸುವುದು
- ಮಕ್ಕಳಲ್ಲಿ ದೇಹದ ವಿವಿಧ ಭಾಗಗಳ ಪರಿಚಯವಾಗುವುದು
- ವಿಜ್ಞಾನ ಸಂಬಂಧಿತ ಚಿತ್ರಕಲೆ ಚೆನ್ನಾಗಿ ಬರುತ್ತದೆ
- ಮಕ್ಕಳು ಖುಷಿಪಡುವರು

**ನಿರೀಕ್ಷಿತ ಫಲಿತಾಂಶ:**

- ಮಕ್ಕಳು ವಿಜ್ಞಾನ ವಿಷಯದಲ್ಲಿ ಪರಿಣಿತಿ ಪಡೆಯುವರು
- ವಿವಿಧ ಅಂಗಗಳ ಮಹತ್ವದ ಬಗ್ಗೆ ಕಲಿಯುವರು

**ಸೂಚಿತ ಗುಂಪು** : 3 ರಿಂದ 4 ನೇ ತರಗತಿ

**ಬೇಕಾಗುವ ಸಾಮಾಗ್ರಿಗಳು** : ಮನುಷ್ಯನ ದೇಹದ ಚಿತ್ರದ ಚಾರ್ಟ್, ಕೆ.ಜಿ. ಹಾಳೆ, ಪೆನ್ಸಿಲ್, ಎರೆಸರ್, ಶಾರ್ಪ್‌ನರ್.

**ಮಾದರಿ ಚಟುವಟಿಕೆ**

**ಸಿಬ್ಬಂದಿ :** ನಮಸ್ತೆ ಮಕ್ಕಳೇ ಹೇಗಿದ್ದೀರಾ ?

